S C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 167/2020

ಚಾ.ಸಾ.–07 ಫ್ರಾ.ಸಾ.–03

| | |
|---|---|
| **ಸಾಕ್ಷಿದಾರರ ಹೆಸರು** | **ನಿಂಗಯ್ಯ** |
| **ತಂದೆಯ ಹೆಸರು** | **ಕವಡೆ ನಿಂಗಯ್ಯನ ಸಿದ್ದಯ್ಯ** |
| **ವಯಸ್ಸು** | **50 ವರ್ಷಗಳು** |
| **ಉದ್ಯೋಗ** | **ವ್ಯವಸಾಯ** |
| **ವಾಸ** | **ಮುಟ್ಟನಹಳ್ಳಿ ಗ್ರಾಮ, ಮಳವಳ್ಳಿ ತಾಲ್ಲೂಕು** |

**ದಿನಾಂಕಃ 17.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1 ಮತ್ತು 2 ರವರ ಪರಿಚಯ ನನಗೆ ಇದೆ. ಅವರು ನಮ್ಮ ಗ್ರಾಮದವರು. ಅವರು ಪರಿಶಿಷ್ಟ ಜಾತಿಗೆ ಸೇರಿದವರು. ನನಗೆ ಚಾಸಾ- 3, 4, 8 ರವರ ಪರಿಚಯವಿದೆ. ಅವರೆಲ್ಲರು ನಮ್ಮ ಗ್ರಾಮದವರು.

2) ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇಲ್ಲ, ಅವರನ್ನು ನಾನು ಈ ಹಿಂದೆ ನೋಡಿರುವುದಿಲ್ಲ, ಅವರು ಯಾವ ಊರಿನವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ.

3) ಈ ಪ್ರಕರಣದ ಗಲಾಟೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರು ಚಾಸಾ-1 ಮತ್ತು 2 ರವರನ್ನು ಜಾತಿ ನಿಂದನೆ ಮಾಡಿ ಬೈದು ಹೊಡೆದಿರುತ್ತಾರೆ ಎನ್ನುವ ಸಂಗತಿಯನ್ನು ನಾನು ನೋಡಿರುವುದಿಲ್ಲ. ಈ ಪ್ರಕರಣದ ಗಲಾಟೆಯನ್ನು ನೋಡಿರುತ್ತೇನೆ ಎಂದು ನಾನು ಪೋಲೀಸರಿಗೆ ಹೇಳಿರುವುದಿಲ್ಲ. ಈ

ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನ್ಯಾಯಾಲಯದ ಮುಂದಿರುವ ಎಂಓ–1 ದೊಣ್ಣೆಯನ್ನು ಈ ಹಿಂದೆ ನಾನು ನೋಡಿರುವುದಿಲ್ಲ. ಸದರಿ ದೊಣ್ಣೆಗೂ ಈ ಪ್ರಕರಣಕ್ಕೂ ಏನು ಸಂಬಂದ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**4)** ದಿಃ30.08.2019 ರಂದು ನಾನು ಮಳವಳ್ಳಿ ಡಿ.ವೈ.ಎಸ್.ಪಿ ರವರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ26.08.2019 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯವರು ಊಟ ಮಾಡಿ ಮಲಗಿದ್ದಾಗ ಸುಮಾರು 11.00 ಗಂಟೆ ಸಮಯದಲ್ಲಿ ಚಾಸಾ- 1 ರವರ ಮನೆಯ ಹತ್ತಿರ ಅವರ ಮನೆಯ ಬಾಗಿಲನ್ನು ಯಾರೋ ಜೋರಾಗಿ ಬಡಿಯುವ ಶಬ್ದ ಕೇಳಿಸಿತು ನಂತರ ಚಾಸಾ- 1 ಮತ್ತು 2 ರವರು ಜೋರಾಗಿ ಕೂಗುತ್ತಿದ್ದರು ಅದನ್ನು ಕೇಳಿ ನಾನು ಮನೆಯಿಂದ ಹೊರಗೆ ಬಂದೆ ಎಂದರೆ ಸರಿಯಲ್ಲ. ಆ ಸಮಯ ನಮ್ಮ ಮನೆಯ ಮುಂದೆ ಇದ್ದ ಚಾಸಾ- 3, 4 ರವರು ಹೊರಗಡೆ ಬಂದರು ಎಂದರೆ ಸರಿಯಲ್ಲ. ನಾವು ನೋಡುತ್ತಿದ್ದಂತೆ ಚಾಸಾ- 1 ರವರ ಮನೆಯ ಒಳಗಿಂದ 5 ಜನರು ಹುಡುಗರು ಬೈದುಕೊಂಡು ಮನೆಯ ಹೊರಗೆ ಬಂದವರೆ ಅವರ ಮನೆಯ ಬಾಗಿಲ ಬಳಿ ನಿಂತಿದ್ದ ಮೋಟಾರ್ ಸೈಕಲಿಗೆ ಒಬ್ಬ ಎಂಓ–1 ದೊಣ್ಣೆಯಿಂದ ಹೆಡ್ ಲೈಟ್ ಮತ್ತು ಇತರ ಕಡೆಗಳಿಗೆ ಹೊಡೆದು ಜಖಂಗೊಳಿಸಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಬೆಳಕವಾಡಿ ಪೋಲೀಸ್ ಠಾಣೆಯಿಂದ ಒಬ್ಬ ಪೋಲೀಸರು ಮತ್ತು ಹೋಂ ಗಾರ್ಡ್ ಅಲ್ಲಿಗೆ ಬರುತ್ತಿದ್ದಂತೆ ಆ ಹುಡುಗರು ಅವರ ಕೈಲಿ ಹಿಡಿದಿದ್ದ ದೊಣ್ಣೆ ಸಮೇತ ಒಂದು ಪ್ಯಾಸೆಂಜರಿ ಆಟೋ ಹತ್ತಿ ಹೊರಟುಹೋದರು ಎಂದರೆ ಸರಿಯಲ್ಲ. ಆಗ ಚಾಸಾ- 2 ಮತ್ತು ಪೋಲೀಸರು ಅವರನ್ನು ಹಿಂಬಲಿಸಿಕೊಂಡು ಹೋದರು ಎಂದರೆ ಸರಿಯಲ್ಲ. ಆ ಸಮಯ ನಾವುಗಳು ಚಾಸಾ- 1 ಮತ್ತು 2 ರವರನ್ನು ಏನಾಯಿತು ಎಂದು ಕೇಳಿದಾಗ ಹೀಗ್ಗೆ 3 ವರ್ಷದಲ್ಲಿ ಚಾಸಾ- 8 ರವರ ಬಳಿ ರೂ. 10,000/– ಕೈ ಸಾಲವಾಗಿ

ಪಡೆದುಕೊಂಡು ಅದನ್ನು ಕೊಟ್ಟಿರಲಿಲ್ಲ ಆಗ ಈಗ ಎಂದು ಸಬೂಬು ಹೇಳಿಕೊಂಡು ಬರುತ್ತಿದ್ದು ಈಗ್ಗೆ ಸುಮಾರು 4 ತಿಂಗಳಲ್ಲಿ ಚಾಸಾ- 8 ರವರಿಗೆ ಹಣ ಕೊಡಲೇ ಬೇಕು ಎಂದು ಕೇಳಿದ್ದಕ್ಕೆ 1ನೇ ಆರೋಪಿ ಬಂದು ಚಾಸಾ- 8 ರವರು ಆಗಸ್ಟ್ ತಿಂಗಳು 20ಕ್ಕೆ ಹಣಕೊಡಲು ಒಪ್ಪಿಕೊಂಡಿದ್ದಾರೆ ಒಂದು ವೇಳೆ ಅವರು ಕೊಡದಿದ್ದರೆ ನಾನೇ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದ ಎಂದು ಹೇಳಿದರು ಎಂದರೆ ಸರಿಯಲ್ಲ. ಆದರೆ ಚಾಸಾ- 8 ರವರು ಹಣಕೊಡದೆ ಇದ್ದು 5 – 6 ದಿವಸಗಳಾದರೂ ಆರೋಪಿ – 1 ರವರಿಗೆ ಚಾಸಾ- 8 ದುಡ್ಡು ಕೊಡಲಿಲ್ಲ ನೀನು ಒಪ್ಪಿಕೊಂಡಿದ್ದೀಯಕೊಡಪ್ಪ ಎಂದು ಕೇಳಿದಾಗ ಮಾತು ಮಾತು ಬೆಳೆದು ಅದನ್ನೇ ದ್ವೇಷವಾಗಿಟ್ಟುಕೊಂಡಿದ್ದರು ಎಂದು ಹೇಳಿದರು ಎಂದರೆ ಸರಿಯಲ್ಲ. ಅದರಂತೆ ಆ ದಿನ ರಾತ್ರಿ 10.45 ಗಂಟೆಗೆ ಮನೆಯ ಬಳಿ ಬಂದು ಬಾಗಿಲು ತೆರೆಯುವಂತೆ ಜೋರಾಗಿ ಬಡಿದು ಅವರು ಮತ್ತು ಅವರ ತಾಯಿ ಭಯಪಟ್ಟು ಮೋಬೈಲಿನಿಂದ ಬೆಳಕವಾಡಿ ಪೋಲೀಸ್ ಠಾಣೆಗೆ ಪೋನ್ ಮಾಡಿ ವಿಷಯತಿಳಿಸಿದರು ಎಂದು ಹೇಳಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿಯೇ ಬಾಗಿಲನ್ನು ಬಡಿಯುತ್ತಿದ್ದವರು ಬಾಗಿಲನ್ನು ಜಖಂಗೊಳಿಸಿ ಮನೆಯ ಒಳಗೆ ನುಗ್ಗಿದ್ದು ಅವರನ್ನು ನೋಡಿದಾಗ ಅವರೇ ಈ ಪ್ರಕರಣದ ಆರೋಪಿತರಾಗಿದ್ದರು ಎಂದು ಹೇಳಿದರು ಎಂದರೆ ಸರಿಯಲ್ಲ. ಅವರು ಚಾಸಾ- 1 ಮತ್ತು 2 ರವರೊಂದಿಗೆ ಜಗಳ ತೆಗೆದು ಬಾಯಿಗೆ ಬಂದಂತೆ ಅವಾಚ ಶಬ್ದಗಳಿಂದ ಬೈದು ಜತಿ ನಿಂದನೆ ಮಾಡಿ ಪೆಟ್ರೋಲ್ ಹಾಕಿ ಸುಟ್ಟು ಸಾಯಿಸುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು ಎಂದು ಹೇಳಿದರು ಎಂದರೆ ಸರಿಯಲ್ಲ. ನಂತರ ಮನೆಯ ಒಳಗೆ ಗೊಡೆಯಲ್ಲಿದ್ದ ಎಲ್ ಸಿ ಡಿ ಟಿವಿಯನ್ನು ತೆಗೆದು ಬಿಸಾಡಿದರು ಎಂದು ಹೇಳಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಕ್ಕಪಕ್ಕದವರು ಬರುತ್ತಿದ್ದುದನ್ನು ಕಂಡು ಮನೆಯ ಮುಂದೆ ನಿಲ್ಲಿಸಿದ್ದ ಮೋಟಾರ್ ಸೈಕಲಿಗೆ 1ನೇ ಆರೋಪಿ ದೊಣ್ಣೆಯಿಂದ ಹೊಡೆದು ಜಖಂಗೋಳಿಸಿದರು ಎಂದು ಹೇಳಿದರು ಎಂದರೆ ಸರಿಯಲ್ಲ. ಪೋಲೀಸರು ಬರುವುದನ್ನು ನೋಡಿ ಆಟೋದಲ್ಲಿ ಹೊರಟುಹೋದರು ಎಂದರೆ ಸರಿಯಲ್ಲ. ಸದರಿ ಆಟೋ ನಂ.ಕೆಎ–09–ಸಿ–8236 ಆಗಿತ್ತು ಎಂದರೆ ಸರಿಯಲ್ಲ. ನಂತರ ನಾನು ಅವರ ಮನೆಯ ಒಳಗೆ ಹೋಗಿ ನೋಡಿದಾಗ ಮನೆಯ ಟಿವಿ ಮತ್ತು ಇತರ ವಸ್ತುಗಳು ಚಲ್ಲಾಪಿಲ್ಲಿಯಾಗಿದ್ದವು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**"**ದಿಃ26.08.2019 ರಂದು .............**...** .............**...** .............. **...** .............**...** .............**...** .............**...** ಹೋಗಿರುವುದನ್ನು ತೋರಿಸಿದರು." ಎಂಬ ಹೇಳಿಕೆಯನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.7** ಎಂದು ಗುರುತಿಸಲಾಯಿತು.

5) ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಎಲ್ಲಾ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಜಿ.ಎಂ.ಜೆ ವಕೀಲರಿಂದಃ**

6) ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ